ಪ್ರಾಧಿಕಾರದಿಂದ ಕೈಗೊಳ್ಳಲಾಗಿದೆ. 19.76ಕಿ.ಮೀ. ಉದ್ದದ ರಸ್ತೆಯನ್ನು ಪೂರ್ಣಗೊಳಿಸಲಾಗಿದೆ. ಈ ಭಾಗದ ರಸ್ತೆಯನ್ನು ಕೂಡ ಬಲಪಡಿಸಿ ಅಭಿವೃದ್ಧಿ ಮಾಡಬೇಕಾಗಿದೆ.

ಈ) ಸರ್ಕಾರಿ ಆದೇಶ ಸಂ: ಪಿಡಬ್ಲ್ಯೂ ಡಿ:174:ಸಿಎನ್‌ಆರ್:95 ದಿನಾಂಕ 14-11-95ರ ಪ್ರಕಾರ ಮೈಸೂರು ರಸ್ತೆಯ ಜಂಕ್ಷನ್‌ನಿಂದ ಹೊಸೂರು ರಸ್ತೆಯ ಜಂಕ್ಷನ್‌ವರೆವಿಗೆ ಹೊಸ ವರ್ತುಲ ರಸ್ತೆಯ ಅಭಿವೃದ್ಧಿ ಪಡಿಸಲು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ ಅವರಿಗೆ ಮಹಿಸಲಾಗಿದೆ.

ರಾಜ್ಯದ ಆರ್ಥಿಕ ಸ್ಥಿತಿಗಳ ವಿವರ

89 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಹಣಕಾಸು ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 15ನೇ ಜನವರಿ 1996 ರಂದು ಕರ್ನಾಟಕ ಸರ್ಕಾರದ ಆರ್ಥಿಕ ಸ್ಥಿತಿಗತಿಗಳ ವಿವರಗಳೇನು?

(ಬ್ಯಾಂಕ್ ಬ್ಯಾಲೆನ್ಸ್, ಟ್ರೈಜರಿ ಬ್ಯಾಲೆನ್ಸ್ ಇತ್ಯಾದಿ ವಿವರ ನೀಡಿ).

ಆ) 15-1-1996ರ ವರೆಗೆ ಎಷ್ಟು ಓವರ್ ಡ್ರಾಫ್ಟ್ ಪಡೆಯಲಾಗಿದೆ. 1994-95 ಹಾಗೂ 1995-96ರಲ್ಲಿ ಎಷ್ಟು ಓವರ್ ಡ್ರಾಫ್ಟ್ ಪಡೆಯಲಾಗಿದೆ.

ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಮಂತ್ರಿಗಳು) :

ಅ) ದಿನಾಂಕ: 15-1-1996 ರಂದು ಕರ್ನಾಟಕ ಸರ್ಕಾರವು 6.46 ಕೋಟಿ ರೂಪಾಯಿಗಳ ಅರ್ಥೋಪಾಯ ಮುಂಗಡವನ್ನು ಪಡೆದಿದೆ.

ಆ) 1995-96ನೇ ಸಾಲಿನಲ್ಲಿ ದಿನಾಂಕ: 15-1-96ರ ವರೆಗೂ ಯಾವುದೇ ಓವರ್ ಡ್ರಾಫ್ಟ್‌ನ್ನು ರಾಜ್ಯ ಸರ್ಕಾರವು ಪಡೆದಿಲ್ಲ.

ಪ್ರಕಟಣೆಗಳು

20.2.96ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುವುದು.

1994-95ನೇ ಸಾಲಿನಲ್ಲಿ ರೂ. 4,46,69,71000 (ರೂ. ನಾಲ್ಕೂನೂರ ನಲವತ್ತಾರು ಕೋಟಿ ಅರವತ್ತೊಂಬತ್ತು ಲಕ್ಷ ಎಪ್ಪತ್ತೊಂದು ಸಾವಿರಗಳು ಮಾತ್ರ)ಗಳ ಸಂಚಿತ (Cumulative) ಓವರ್ ಡ್ರಾಫ್ಟ್ ಪಡೆಯಲಾಗಿದೆ.

ಅಧ್ಯಕ್ಷರು : ಮಂಡಿಸಲಾಯಿತು.

ಬೆಂಗಳೂರು ನಗರ ಚಿಕ್ಕಪೇಟೆ ಕ್ಷೇತ್ರದಿಂದ 10ನೇ ವಿಧಾನ ಸಭೆಗೆ ಚುನಾಯಿತರಾಗಿದ್ದ ಡಾ|| ಜೀವರಾಜ್ ಆಳ್ವರವರ ರಾಜೀನಾಮೆ

ಬೆಂಗಳೂರು ನಗರ ಚಿಕ್ಕಪೇಟೆ ಕ್ಷೇತ್ರದಿಂದ 10ನೇ ವಿಧಾನ ಸಭೆಗೆ ಚುನಾಯಿತರಾಗಿದ್ದ ಡಾ|| ಜೀವರಾಜ್ ಆಳ್ವರವರು ವಿಧಾನ ಸಭೆಯ ಸದಸ್ಯತ್ವಕ್ಕೆ ನೀಡಿದ ರಾಜೀನಾಮೆಯನ್ನು ದಿನಾಂಕ 17-2-96ರಂದು ಅಂಗೀಕರಿಸಲಾಗಿದೆ.

ಸಭೆಯ ಮುಂದಿಡಲಾದ [illegible]ಗಳು

ದಿನಾಂಕ 20-2-1996 ರಂದು ನಡೆದ ಸಭೆಯ [illegible] ಸಮಿತಿಯ ಸಭೆಯು ಪ್ರಸ್ತುತ ಅಧಿವೇಶನದಲ್ಲಿ ಈ ಕೆ[illegible] ನಡೆಸಲು ತೀರ್ಮಾನಿಸಲಾಯಿತು.

22-2-1996	ಬೆಳಗ್ಗೆ	10 ಗಂಟೆಯಿಂದ 6 ಗಂಟೆವರೆಗೆ
ಗುರುವಾರ	1.	ಪ್ರಶ್ನೋತ್ತರ
	2.	ಗಮನ ಸೆಳೆಯುವ ಸೂಚನೆ
	3.	ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ
	4.	ಶಾಸನ ರಚನೆ
23-2-1996	ಬೆಳಗ್ಗೆ	9-30 ಗಂಟೆಗೆ
ಶುಕ್ರವಾರ	1.	ಪ್ರಶ್ನೋತ್ತರ
	2.	ಗಮನ ಸೆಳೆಯುವ ಸೂಚನೆ
	3.	ಖಾಸಗಿ ಕಾರ್ಯಕಲಾಪ
24-2-1996	ಅಧಿವೇಶನವಿರುವುದಿಲ್ಲ	
ಶನಿವಾರ		
25-2-1996	ರಜಾ ದಿನ	
ಭಾನುವಾರ		
26-2-1996	ಬೆಳಗ್ಗೆ	10 ಗಂಟೆಯಿಂದ ಸಂಜೆ 6 ಗಂಟೆಗೆ
ಸೋಮವಾರ	1.	ಪ್ರಶ್ನೋತ್ತರ
28-2-1996	2.	ಗಮನ ಸೆಳೆಯುವ ಸೂಚನೆ
ಬುದವಾರದವರೆಗೆ	3.	ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮುಂದುವರಿದ ಚರ್ಚೆ.
29-2-1996	ಬೆಳಗ್ಗೆ	10 ಗಂಟೆಯಿಂದ 6 ಗಂಟೆವರೆಗೆ
ಗುರುವಾರ	1.	ಪ್ರಶ್ನೋತ್ತರ
	2.	ಗಮನ ಸೆಳೆಯುವ ಸೂಚನೆ
	3.	ಶಾಸನ ರಚನೆ
1-3-1996	ಬೆಳಗ್ಗೆ	9-30 ಗಂಟೆಗೆ
ಶುಕ್ರವಾರ	1.	ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಉತ್ತರ ಹಾಗೂ ಮತಕ್ಕೆ ಹಾಕುವುದು.
	2.	ಖಾಸಗಿ ಕಾರ್ಯಕಲಾಪ

ಕೆಲವರು ಸದಸ್ಯರುಗಳು ಶೂನ್ಯ ವೇಳೆಯಲ್ಲಿ ಎರಡು ಮೂರು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇವೆ ಎಂದು ಹೇಳಿದ್ದಾರೆ. ನಾನು ತಮಗೆ ಅವಕಾಶವನ್ನು ಕೊಡುತ್ತೇನೆ.